# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ.89/2020

ಚಾಸಾಃ 21 ಪ್ರಾಸಾಃ 17

**ದಿನಾಂಕ 03.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ವೆಂಕಟೇಶ್ ಎಸ್ |
| ತಂದೆಯ ಹೆಸರು | ಸಿದ್ದರಾಜು |
| ವಯಸ್ಸು | 38 ವರ್ಷ |
| ಕೆಲಸ | ಪ್ರಮುಖ ಅಗ್ನಿ ಶಾಮಕ, ಅಗ್ನಿ ಶಾಮಕ ಗುಬ್ಬಿ |
| ವಾಸಸ್ಥಳ | ಗುಬ್ಬಿ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ 2025 ರವರಿಗೆ ಅಗ್ನಿ ಶಾಮಕ ಎಂದು ಅಗ್ನಿಶಾಮಕ ಕಚೇರಿ, ತುಮಕೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ .

2) ದಿ 01-02-2020 ರಂದು ಕ್ಯಾತ್ಸಂದ್ರ ವೃತ್ತ ಕಚೇರಿಯವರ ಕೋರಿಕೆಯ ಮೇರೆಗೆ ನಮ್ಮ ಮೇಲಾಧಿಕಾರಿಗಳು ನನ್ನನ್ನು ಪಂಚನಾಮೆಗೆ ಹಾಜರಾಗಲು ಸೂಚಿಸಿದ ಮೇರೆಗೆ ನಾನು ಬೆಳಗ್ಗೆ 10.15 ಗಂಟೆಗೆ ಕ್ಯಾತ್ಸಂದ್ರ ವೃತ್ತ ಕಚೇರಿಗೆ ಹೋಗಿರುತ್ತೇನೆ . ಕ್ಯಾತ್ಸಂದ್ರ ವೃತ್ತ ನಿರೀಕ್ಷಕರು ಘಟನೆಯ ಬಗ್ಗೆ ಮಾಹಿತಿ ತಿಳಿಸಿ ಪಂಚರಾಗಲು ಕೋರಿಕೊಂಡಿದ್ದು, ಅದರಂತೆ ನಾನು ಒಪ್ಪಿ ಪಂಚನಾಮೆಗೆ ಸಹಕರಿಸಲು ಒಪ್ಪಿದ ಮೇರೆಗೆ

ನೋಟೀಸ್ ಗೆ ಸಹಿ ಮಾಡಿದ್ದು, ಸಾಕ್ಷಿಯು ನೋಟೀಸ್ ಮತ್ತು ಅದರ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು , ಪಂಚರಿಗೆ ನೀಡಿರುವ ನೋಟೀಸ್ ನ್ನು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ವೃತ್ತ ನಿರೀಕ್ಷಕರು ನಮ್ಮನ್ನು ಹಾಗೂ ಆರೋಪಿಗಳನ್ನು ಸರ್ಕಾರಿ ವಾಹನದಲ್ಲಿ ಕರೆದುಕೊಂಡು ಆರೋಪಿತರು ತೋರಿಸಿರುವ ಮಾರನಾಯಕನಪಾಳ್ಯದ ಒಂದು ಸೇತುವೆಯ ಬಳಿ ಕರೆದುಕೊಂಡು ಹೋಗಿ ಜೀಪ್ ನಿಲ್ಲಿಸಿ ಮುಂದೆ ಹೋಗಿ ಆರೋಪಿತರು ಇದೇ ಸ್ಥಳದಲ್ಲಿ ಕೊಲೆ ಮಾಡಿರುತ್ತೇವೆಂದು ಸ್ಥಳವನ್ನು ತೋರಿಸಿದ್ದು , ಪೊಲೀಸರು ಸ್ಥಳವನ್ನು ಪರಿಶೀಲನೆ ಮಾಡಿ ಪೊಲೀಸರು ನಮ್ಮ ಸಮಕ್ಷಮ ಬೆಳಗ್ಗೆ 11.45 ರಿಂದ 12.15 ರವರಿಗೆ ಪಂಚನಾಮೆ ಮಾಡಿರುತ್ತಾರೆ. ಪಂಚಾಮೆಯನ್ನು ಪೊಲೀಸರು ಲ್ಯಾಪ್ ಟಾಪ್ ನಲ್ಲಿ ತಯಾರಿಸಿ ಸ್ಥಳದಲ್ಲಿ ಪ್ರಿಂಟ್ ತೆಗೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸ್ಥಳಪಂಚನಾಮೆಯನ್ನು ಈಗಾಗಲೇ ನಿಪಿ-14 ಎಂದು ಗುರುತಿಸಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-14(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ಪೋಟೋ ಮತ್ತು ವಿಡಿಯೋವನ್ನು ಮಾಡಿರುತ್ತಾರೆ.

3) ಪಂಚನಾಮೆಯ ಕ್ರಮವನ್ನು ಮುಗಿಸಿದ ನಂತರ ಆರೋಪಿತನು ಕೃತ್ಯಕ್ಕೆ ಉಪಯೋಗಿಸಿದ ವಾಹನ ಮತ್ತು ಕೃತ್ಯದ ಸಮಯದಲ್ಲಿ ತಾವು ಧರಿಸಿದ್ದ ಬಟ್ಟೆಗಳು ಮತ್ತು ಆಯುಧವನ್ನು ತೋರಿಸುತ್ತೇವೆಂದು ಹೇಳಿದಾಗ, ನಂತರ ಅಲ್ಲಿಂದ ಪೊಲೀಸರು ನಮ್ಮನ್ನು ಹಾಗೂ ಆರೋಪಿಗಳನ್ನು ಸರ್ಕಾರಿ ವಾಹನದಲ್ಲಿ ಹೋಗಿ ಮುಂದೆ ಕ್ರೀಡಾ ಸಮುಚ್ಚಯ ಕಟ್ಟಡದ ಬಳಿ ವಾಹನವನ್ನು ನಿಲ್ಲಿಸಿ ಎಂದು ಆರೋಪಿತರು ಹೇಳಿದಾಗ ಅಲ್ಲಿಂದ ಸ್ವಲ್ಪ ಮುಂದೆ ಹೋಗಿ ರಸ್ತೆಯ ಪಕ್ಕದಲ್ಲಿ ಇರುವ ಒಂದು ಆಟೋವನ್ನು ಆರೋಪಿ -1 ಭರತನು ತೋರಿಸಿದ್ದು , ಪೊಲೀಸರು ನನ್ನ ಸಮಕ್ಷಮ ಆಟೋವನ್ನು ಪರಿಶೀಲನೆ ಮಾಡಿದಾಗ ಚಾಲಕರ ಸೀಟ್ ನ ಅಕ್ಕಪಕ್ಕದಲ್ಲಿ ರಕ್ತದ ಕಲೆಗಳು ಅಂಟಿಕೊಂಡಿದ್ದು ಕಂಡು ಬಂದಿತು, ರಕ್ತದ ಕಲೆಗಳನ್ನು ತೆಗೆದು ಕೊಂಡು ಒಂದು ಡಬ್ಬಿಯಲ್ಲಿ ಶೇಖರಣೆ ಮಾಡಿ ನನ್ನ ಸಮಕ್ಷಮ ಸೀಲ್ ಮಾಡಿದರು. ನಂತರ ಆರೋಪಿ -1 ಭರತನು ಸ್ವಲ್ಪ ಮುಂದೆ ಚರಂಡಿಯ ಬಳಿ ಹೋಗಿ ಒಂದು ಟೀಶರಟ್ , ಒಂದು ಜೀನ್ಸ್ ಪ್ಯಾಂಟ್ ನ್ನು ತೆಗೆದು ತೋರಿಸಿ ಕೃತ್ಯದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳು ಎಂದು ಹಾಜರುಪಡಿಸಿದ್ದು , ಅವುಗಳನ್ನು ಪರಿಶೀಲನೆ ಮಾಡಿದಾಗ ಬಟ್ಟೆಗಳ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು ಆಗಿರುವುದು ಕಂಡು ಬಂದಿತು. ಆ 2 ಬಟ್ಟೆಗಳನ್ನು ಪ್ರತ್ಯೇಕವಾಗಿ ಸೀಲ್ ಮಾಡಲಾಯಿತು.

4) ನಂತರ ಆರೋಪಿ-ಕಾಂತರಾಜು ಅದೇ ಚರಂಡಿ ಸ್ಥಳದಲ್ಲಿ ಒಂದು ಶರಟ್ , ಒಂದು ಬರ್ಮೋಡ ನಿಕ್ಕರ್ ನ್ನು ತೆಗೆದು ತೋರಿಸಿ , ಕೃತ್ಯ ನಡೆದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳು ಎಂದು ಹಾಜರುಪಡಿಸಿದ್ದು , ಅವುಗಳನ್ನು ಪರಿಶೀಲನೆ ಮಾಡಿದಾಗ ರಕ್ತದಕಲೆಗಳು ಆಗಿದ್ದವು. ನಂತರ ಚರಂಡಿಯಿಂದ ಆರೋಪಿ-ಕಾಂತರಾಜು ಒಂದು ಮಚ್ಚನ್ನು ತೆಗೆದು ತೋರಿಸಿ ಕೃತ್ಯಕ್ಕೆ ಉಪಯೋಗಿಸಿದ ಮಚ್ಚು ಎಂದು ಹೇಳಿದ್ದು ಅದನ್ನು ಪರಿಶೀಲನೆ ಮಾಡಿದಾಗ ಮಚ್ಚಿನಲ್ಲಿ ರಕ್ತದ ಕಲೆಗಳು ಅಂಟಿರುವುದು ಕಂಡು ಬಂದಿತು. ಸದರಿ ವಸ್ತುಗಳನ್ನು ಒಂದು ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿರುತ್ತಾರೆ. ಸ್ಥಳದಿಂದ ಒಂದು ಆಟೋ ಕೆಎ-06-ಡಿ-5187 ನ್ನು ಸಹ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1 ರಿಂದ 2.30 ರವರಿಗೆ ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿ ಪ್ರಿಂಟರ್ ಸಹಾಯದಿಂದ ಸ್ಥಳದಲ್ಲಿ ಪ್ರಿಂಟ್ ತೆಗೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-15(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಕ್ರಮ ಜರೂಗಿಸುವಾಗ ಫೋಟೋ ಮತ್ತು ವಿಡಿಯೋ ತೆಗೆದಿರುತ್ತಾರೆ.

5) ಪೊಲೀಸರು ಅಮಾನತ್ತುಪಡಿಸಿಕೊಂಡಿರುವ ಆಟೋದ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , 7 ಫೋಟೋಗಳನ್ನು ಒಟ್ಟಾಗಿ ನಿಪಿ-30 ಎಂದು ಗುರುತಿಸಲಾಯಿತು. ಮಚ್ಚನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ಮುಮಾ-9 ಎಂದು ಗುರುತಿಸಲಾಗಿದೆ. ಆರೋಪಿ ಭರತ್ ನು ಹಾಜರುಪಡಿಸಿದ ಟೀಶರಟ್, ಜೀನ್ಸ್ ಪ್ಯಾಂಟ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ-10, ಮುಮಾ-11 ಎಂದು ಗುರುತಿಸಲಾಯಿತು. ಆರೋಪಿ ಕಾಂತರಾಜು ಹಾಜರುಪಡಿಸಿದ ಟೀಶರಟ್ ಮತ್ತು ಬರ್ಮೋಡ ನಿಕ್ಕರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ-12,13 ಎಂದು ಗುರುತಿಸಲಾಯಿತು. ಆಟೋ ರೀಕ್ಷದ ಮೇಲಿಂದ ಶೇಖರಿಸಿದ್ದ ರಕ್ತದ ಕಲೆಗಳು ಇರುವ ಡಬ್ಬಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುಮಾ-14 ಎಂದು ಗುರುತಿಸಲಾಯಿತು. ಮುಮಾ- 9 ರಿಂದ 14 ರ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ವಿ ಸಿ ಮೂಲಕ ಹಾಜರುಪಡಿಸಿದ ಆರೋಪಿ ಭರತ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿ ಕಾಂತರಾಜುನನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಮರಳಿ ಠಾಣೆಗೆ ಬಂದಿದ್ದು , ತನಿಖಾಧಿಕಾರಿಗಳು ಪಂಚನಾಮೆ ಪ್ರಕ್ರಿಯನ್ನು ಮತ್ತು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ . ವಿಡಿಯೋವನ್ನು ತೆರೆದ ನ್ಯಾಯಾಲಯದಲ್ಲಿ

ಆರೋಪಿ ಮತ್ತು ಆರೋಪಿಪರ ವಕೀಲರ ಸಮಕ್ಷಮದಲ್ಲಿ ಹಾಕಿ ನೋಡಲಾಗಿ ಸದರಿ ವಿಡಿಯೋ ಸಿಡಿಯಲ್ಲಿ ಸ್ಥಳಪಂಚನಾಮೆ ಮಾಡಿರುವ ಮತ್ತು ಮುದ್ದೆ ಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುವ ಪೋಟೋಗಳು ಮಾತ್ರ ಇದ್ದು ಅದರಲ್ಲಿ ಯಾವುದೇ ವಿಡಿಯೋಗಳು ಇರುವುದಿಲ್ಲ. ಸದರಿ ಸಿಡಿಯನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದೆ. ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು 1 ಮತ್ತು 2 ಆರೋಪಿಯ ಪರ ಶ್ರೀ ಕೆ ಹೆಚ್ ಜಿ ವಕೀಲರಿಂದ ಃ-</u>**

6) ನಮ್ಮ ಮೇಲಾಧಿಕಾರಿಗಳಿಗೆ ಸಿಪಿಐ ಕಚೇರಿಯಿಂದ ಪಂಚರಾಗಿ ಕಳುಹಿಸಲು ಬಂದಿದ್ದ ನೋಟೀಸ್ ನ್ನು ನಾನು ನೋಡಿರುವುದಿಲ್ಲ. ನಮ್ಮ ಮೇಲಾಧಿಕಾರಿಗಳು ನನಗೆ ಲಿಖಿತವಾಗಿ ಪಂಚರಾಗಿ ಹೋಗಿ ಎಂದುಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ. ಇದಕ್ಕಿಂತ ಮೊದಲು ನಾನು ಯಾವುದೇ ಪ್ರಕರಣದಲ್ಲಿ ಪಂಚರಾಗಿ ಭಾಗವಹಿಸಿರುವುದಿಲ್ಲ. ನನ್ನ ಮೇಲಾಧಿಕಾರಿಗಳು ಕ್ಯಾತ್ಸಂದ್ರ ಸಿಪಿಐ ಕಚೇರಿಗೆ ಹೋಗಲು ಬೆಳಗ್ಗೆ 10 ಗಂಟೆಗೆ ತಿಳಿಸಿದರು, ನಾನು ಸುಮಾರು 10.15 ಗಂಟೆ ಸಮಯಕ್ಕೆ ಸಿಪಿಐ ಕಚೇರಿಗೆ ಹೋದೆನು. ಸಿಪಿಐ ಕಚೇರಿಯಿಂದ ನಾನು ಮಾರನಾಯಕನಪಾಳ್ಯಕ್ಕೆ ಇಲಾಖಾ ವಾಹನದಲ್ಲಿ ಹೋಗಿದ್ದು, ಇಲಾಖಾ ವಾಹನ ನಂಬರ್ ನನಗೆ ಗೊತ್ತಿಲ್ಲ. 2 ವಾಹನಗಳಲ್ಲಿ ನಾವು ಒಟ್ಟು 6 ಜನ ಸ್ಥಳಕ್ಕೆ ಹೋದೆವು. ಮಾರನಾಯಕನಹಳ್ಳಿ ಸೇತುವೆಯ ಬಳಿ ಘಟನ ಸ್ಥಳ

ಪೂರ್ವ ದಿಕ್ಕಿಗೆ ಇತ್ತು. ಸದರಿ ರಸ್ತೆ ಉತ್ತರ – ದಕ್ಷಿಣ ಮುಖವಾಗಿತ್ತು. ಸದರಿ ಟಾರ್ ರಸ್ತೆ ಸುಮಾರು 20 ಅಡಿ ಅಗಲವಿತ್ತು. ಸದರಿ ಸೇತವೆಯ ಕೆಳಗೆ ಚರಂಡಿ ನೀರು ಹರಿಯುತ್ತಿತ್ತೋ ಇಲ್ಲವೋ ನಾನು ಗಮನಿಸಿರುವುದಿಲ್ಲ . ಸದರಿ ಸೇತುವೆಯ ಎದುರುಗಡೆ ಒಂದು ಮನೆ ಇದೆ. ಅದರ ಹಿಂಭಾಗಕ್ಕೆ ಸುಮಾರು 10-15 ಮನೆಗಳು ಇರಬಹುದು. ಸದರಿ ಘಟನಾ ಸ್ಥಳದಲ್ಲಿ ಯಾರಾದರೂ ಗಲಾಟೆಯಾಗಿ ಕಿರುಚಿಕೊಂಡರೆ ಅಕ್ಕಪಕ್ಕದ ಮನೆಗಳಿಗೆ ಕೇಳಿಸುತ್ತದೆ. ಸದರಿ ಸ್ಥಳದಲ್ಲಿ ಸಿಸಿ ಟಿ ವಿ ಕ್ಯಾಮರ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ . ಸದರಿ ಸ್ಥಳದಲ್ಲಿ ಲೈಟ್ ಕಂಬವಿದ್ದು ಅದರಲ್ಲಿ ಲೈಟ್ ಇದೆಯೋ ಇಲ್ಲವೋ ಗೊತ್ತಿಲ್ಲ. ಸದರಿ ಸ್ಥಳದಲ್ಲಿ ಪ್ರಿಂಟ್ ನ್ನು ತೆಗೆದಿರುತ್ತಾರೆ. ಆದರೆ ಪವರ್ ಸಪ್ಲೈ ಎಲ್ಲಿಂದ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಕ್ಯಾಮರದಿಂದ ಪೋಟೋ ಮತ್ತು ವಿಡಿಯೋ ತೆಗೆದರು, ಆದರೆ ಯಾವ ಕಂಪನಿಯ ಕ್ಯಾಮರವೆಂದು ಗೊತ್ತಿಲ್ಲ . ಸಾಮಾನ್ಯವಾಗಿ ಪೋಟೋಗಳಲ್ಲಿ ಸಮಯ ಮತ್ತು ದಿನಾಂಕ ಬರುತ್ತದೆ ಅಂದರೆ ಸರಿ. ಈಗ ಪ್ರದರ್ಶಿಸಿದ ಪೋಟೋಗಳಲ್ಲಿ ಸಮಯ ಮತ್ತು ದಿನಾಂಕ ಇಲ್ಲ ಅಂದರೆ ಸರಿ. ಸ್ಥಳದಲ್ಲಿ ಸುಮಾರು 20 ಜನ ಇದ್ದರು. ಸ್ಥಳೀಯ ವ್ಯಕ್ತಿಗಳ ಹೇಳಿಕೆ ಪಡೆದುಕೊಂಡಿರುವ ಬಗ್ಗೆ ಮಾಹಿತಿ ನನಗೆ ಇಲ್ಲ . ಪಂಚನಾಮೆಗೆ ನಾವು ಸಹಿ ಮಾಡಿದಾಗ ಒಟ್ಟು 6 ಜನರ ಸಹಿ ಇತ್ತು. ಘಟನಾ ಸ್ಥಳ ಕ್ರಿಡಾ ಸಮುಚ್ಚ ಸುಮಾರು 5-6 ಕಿಮೀ ಅಂತರವಿರುತ್ತದೆ. ಆಟೋದಲ್ಲಿ

ಕಂಬಿಗಳ ಮೇಲೆ ಮತ್ತು ಸೀಟ್ ಮೇಲೆ ರಕ್ತವಿತ್ತು, ಅವುಗಳನ್ನು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ . ಸದರಿ ರಕ್ತದ ಕಲೆಗಳನ್ನು ಬ್ಲೇಡ್ ನಿಂದ ಕೆರೆದು ಡಬ್ಬಿಯಲ್ಲಿ ಶೇಖರಿಸಿಕೊಂಡರು. ಸೀಟ್ ನ ಮೇಲೆ ಬಿದಿದ್ದ ರಕ್ತವನ್ನು ಹತ್ತಿಯಲ್ಲಿ ಶೇಖರಿಸಿದರು, ಕಂಬಿಯ ಮೇಲೆ ಇದ್ದ ರಕ್ತವನ್ನು ಕೆರೆದು ರಕ್ತವನ್ನು ಶೇಖರಿಸಿದರು. ಎಂಓ ಗಳನ್ನು ಆರ್ ಎಂಬ ಅಕ್ಷರದಿಂದ ಸೀಲ್ ಮಾಡಿದರು. ಮುಮಾ-10 ಕಪ್ಪು ಬಣ್ಣದ ಟೀ ಶರಟ್ ಅಂದರೆ ಸರಿ. ಎಲ್ಲಾ ಬಟ್ಟೆ ಅಂಗಡಿಗಳಲ್ಲಿ ಸದರಿ ಬಟ್ಟೆ ಸಿಗುತ್ತದೆ ಅಂದರೆ ಸರಿ. ಮಚ್ಚು ಸಹ ಎಲ್ಲಾ ಅಂಗಡಿಗಳಲ್ಲಿ ಸಿಗಬಹುದು ಅಂದರೆ ಇರಬಹುದು. ಅದೇ ಮಚ್ಚು ಎಂದು ಹೇಳಲು ಅದರ ಹಿಡಿಯನ್ನು ಗುರುತು ಹಿಡಿದುಕೊಂಡಿರುತ್ತೇನೆ. ಹಿಡಿಯ ಕಲರ್ ನ್ನು ನಮೂದು ಮಾಡಿರುವುದಿಲ್ಲ. ಕೃತ್ಯ ನಡೆದ ಸ್ಥಳದ ಚಕ್ಕು ಬಂದಿ ಪೂರ್ವಕ್ಕೆ -ಹಳ್ಳ , ಪಶ್ಚಿಮಕ್ಕೆ - ರಸ್ತೆ ಮತ್ತು ಮೋರಿ , ಉತ್ತರಕ್ಕೆಃ- ಸಿದ್ಧಗಂಗಾ ಕ್ರಾಸ್ - ಮಾರನಾಯಕಹಳ್ಳಿಗೆ ಹೋಗುವ ರಸ್ತೆ , ದಕ್ಷಿಣಕ್ಕೆ ಃ- ರಸ್ತೆ.

ಅಮಾನತ್ತು ಪಂಚನಾಮೆ ಮಾಡಿದ ಜಾಗದ ಚಕ್ಕು ಬಂದಿ ಪೂರ್ವಕ್ಕೆ - ಜಮೀನು, ಪಶ್ಚಿಮಕ್ಕೆ -ರಸ್ತೆ, ಉತ್ತರಕ್ಕೆ -ಮೈದಾಳ ರಸ್ತೆ , ದಕ್ಷಿಣಕ್ಕೆ ಃ- ರಸ್ತೆ. ತಾವು ಯಾವುದೇ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಪಂಚನಾಮೆಗೆ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ , ತಾವು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

ಆರೋಪಿತರನ್ನು ಇದೇ ಮೊದಲ ಭಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೀರಿ ಅಂದರೆ ಸರಿಯಲ್ಲ . 2 ಮಹಜರ್ ಗಳಿಗೆ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ತಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ-

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.